ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

ಪ್ರಕಾಶ್ ಭರ್ಮು ಚಂದಗಡೆ (ವಾದ ಪತ್ರದಲ್ಲಿ ಪ್ರಕಾಶ್ ಭರ್ಮು ಗಿಡಗುಲ್ಲೆ ಎಂದು ತಪ್ಪಾಗಿ ನಮೂದಿಸಲಾಗಿದೆ) -ವಿರುದ್ಧ ಸುವರ್ಣ ಸಿಕಂದರ್ ಕಾಣಿ ಮತ್ತು ಇತರರು

ಆರ್.ಎಫ್.ಎ. ಸಂಖ್ಯೆ: 4179/2012 ಸಿ.ಡಬ್ಲ್ಯೂ. ಆರ್.ಎಫ್.ಎ. ಸಂಖ್ಯೆ 4177/2012 (ಪಿ.ಎ.ಆರ್ ಮತ್ತು ಎಸ್.ಇ.ಪಿ. ಪಿ. ಓ.ಎಸ್ . ) ದಿನಾಂಕ 31ನೇ ಮೇ, 2017

ತೀರ್ಪು

ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್:

ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು, ಚಿಕ್ಕೋಡಿ ಇವರು, 23 ನೇ ಜುಲೈ 2012 ರಂದು ಒ.ಎಸ್.ಸಂಖ್ಯೆ: 88/2009 ರಲ್ಲಿ ನೀಡಿದ ತೀರ್ಪು ಹಾಗೂ ಡಿಕ್ರಿಯನ್ನು ಪ್ರಶ್ನಿಸಿ ಈ ನಿಯತ ಪ್ರಥಮ ಅಪೀಲುಸಂಖ್ಯೆ: 4177/2012 ನ್ನು ಸಲ್ಲಿಸಿದ್ದು, ತತ್ಪರಿಣಾಮದಿಂದ ವಾದಿ-ಪ್ರತ್ಯರ್ಜಿದಾರಸಂಖ್ಯೆ: 1 ಇವರು ತನ್ನ ತಂದೆ ಸಾತಪ್ಪ ಧೂಳಪ್ಪ ಚಂದಗಡೆ ಮತ್ತು ಇತರ ಆರು ಜನರ ವಿರುದ್ಧ ಹೂಡಿದ ದಾವೆಯನ್ನು ಡಿಕ್ರಿ ಮಾಡಿರುತ್ತಾರೆ.ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ವಾದಿಯು ಹೂಡಿದ ದಾವೆಯನ್ನು ಡಿಕ್ರಿ ಮಾಡುವಾಗ, ದಾವೆ ನಿಗದಿ ಸ್ವತ್ತುಗಳಲ್ಲಿ ಅ ವಾದಿಯ ಪರವಾಗಿ 1/8 ನೆಯ ಪಾಲನ್ನು ಐತೀರ್ಪು ಕೊಟ್ಟ ಸಂದರ್ಭದಲ್ಲಿ, 7 ನೇ ಪ್ರತಿವಾದಿಯ ತಂದೆಯಾದ ಭರ್ಮು ಗಿಡಗುಲ್ಲೆ ಅವರು ಗಿಡಗುಲ್ಲೆ ಪರಿವಾರಕ್ಕೆ ದತ್ತಕಕ್ಕೆ ಹೋಗಿರುವುದರಿಂದ, ಅವರು ಕುಟುಂಬದ ಸ್ವತ್ತುಗಳಲ್ಲಿ ಯಾವುದೇ ಪಾಲಿಗೆ ಹಕ್ಕುಳವರಾಗಿರುವುದಿಲ್ಲ ಮತ್ತು ತತ್ಪರಿಣಾಮವಾಗಿ, 7 ನೇ ಪ್ರತಿವಾದಿಯು ಯಾವುದೇ ಪಾಲಿಗೆ ಹಕ್ಕುಳ್ಳವರಾಗುವುದಿಲ್ಲವೆಂದು ನಿರ್ಣಯಿಸಿದ್ದಾರೆ.ಆದುದರಿಂದ, ವಿಚಾರಣಾ ನ್ಯಾಯಾಧೀಶರು ಪಾಲನ್ನು ವಿಭಜಿಸಿ, ಭರ್ಮು ಗಿಡಗುಲ್ಲೆ ಅವರ ಹಕ್ಕನ್ನು ಹೊರತುಪಡಿಸಿ, ವಾದಿಯ ಪರವಾಗಿ 1/ 8 ರಷ್ಟು ಪಾಲನ್ನು ವಾದಿಯ ಹೆಸರಿಗೆ ಹಂಚಿಕೆ ಮಾಡಲು ಕ್ರಮ ಕೈಗೊಂಡಿದ್ದಾರೆ.

2. ಈ ಹಿನ್ನೆಲೆಯಲ್ಲಿ, ಆರ್.ಎಫ್.ಎ.ಸಂಖ್ಯೆ: 4179/2012 ರಲ್ಲಿ 7 ನೇ ಪ್ರತಿವಾದಿಯಾದ ಪ್ರಕಾಶ್ ಅವರು ಇನ್ನೊಂದು ಅಪೀಲನ್ನು ಸಲ್ಲಿಸಿದ್ದಾರೆ.ಎರಡೂ ಅಪೀಲುಗಳು ಒಂದೇ ಸಾಮಾನ್ಯ ತೀರ್ಪಿನಿಂದ ಉದ್ಭವಿಸಿರುವುದರಿಂದ, ನಾವು ಅವುಗಳನ್ನು ಒಟ್ಟಿಗೆ ಆಲಿಸಿ, ಎರಡೂ ಅಪೀಲುಗಳನ್ನು ಈ ಸಾಮಾನ್ಯ ತೀರ್ಪಿನ ಮೂಲಕ ವಿಲೇ ಮಾಡಿದ್ದೇವೆ.

3. ಸಂಕ್ಷಿಪ್ತವಾಗಿ ಹೇಳಿದಂತೆ, ಇದರಲ್ಲಿನ ಸಂಗತಿಗಳೆಂದರೆ:

ಧೂಳಪ್ಪ ಎಂಬುವರು ಪ್ರಾಸ್ತಾವಿತ/ಮೂಲ ಪುರುಷ ವ್ಯಕ್ತಿಯಾಗಿದ್ದರು.ಅವರು 1960 ನೇ ಇಸವಿಯಲ್ಲಿ ಮರಣ ಹೊಂದಿದ್ದು, ( 1) ದೇವಪ್ಪ, ( 2) ಸಾತಪ್ಪ (ಪ್ರತಿವಾದಿಸಂಖ್ಯೆ: 1), ( 3) ರಘು, ( 4) ಭರ್ಮು ಎಂಬ ನಾಲ್ಕು ಗಂಡು ಮಕ್ಕಳನ್ನು ಹಾಗೂ ಕಲ್ಲವ್ವ (ರತ್ನಾಬಾಯಿ ಎಂದೂ ವಿವರಿಸಲಾಗಿದೆ) ಎಂಬ ಪತ್ನಿಯನ್ನು ಅಗಲಿದ್ದಾರೆ.ಧೂಳಪ್ಪ ಅವರು ಕೃಷಿ ಭೂಮಿಯ ಸಂಬಂಧದಲ್ಲಿ ಗೇಣಿದಾರರಾಗಿದ್ದು, ಅವು ದಾವೆ ನಿಗದಿತ ಸ್ವತ್ತುಗಳಾಗಿವೆ.

1960 ರಲ್ಲಿ ಧೂಳಪ್ಪ 106 ಅವರ ಮರಣಾ ನಂತರ, ಅವರ ಹಿರಿಯ ಮಗ ದೇವಪ್ಪ ಅವರ ಹೆಸರನ್ನು ಕಂದಾಯ ದಾಖಲೆಗಳಲ್ಲಿ ದಾಖಲಿಸಲಾಗಿತ್ತು.ದೇವಪ್ಪ ಅವರು ಸಹ 1965 ನೇ ಇಸವಿಯಲ್ಲಿ ಅವಿವಾಹಿತರಾಗಿಯೇ ಮರಣ ಹೊಂದಿದರು.ಅವರ ಮರಣಾನಂತರ, ಧೂಳಪ್ಪ ಅವರ ಬೇರೆ ಇಬ್ಬರು ಮಕ್ಕಳಾದ ಸಾತಪ್ಪ ಹಾಗೂ ರಘು ಅವರ ಹೆಸರುಗಳನ್ನು ಕಂದಾಯ ದಾಖಲೆಗಳಲ್ಲಿ ಗೇಣಿದಾರರೆಂದು ದಾಖಲಿಸಲಾಯಿತು.ಧೂಳಪ್ಪ ಅವರ ಇನ್ನೊಬ್ಬ ಮಗನಾದ ಭರ್ಮು ಅವರ ಹೆಸರು ಕಂದಾಯ ದಾಖಲೆಗಳಲ್ಲಿ

ದಾಖಲಾಗಿಲ್ಲ.ರಘು ಅವರು 1992 ನೇ ಇಸವಿಯಲ್ಲಿ ಮರಣ ಹೊಂದಿದರು.ಅವರು ತಮ್ಮ ಪತ್ನಿ-ಪ್ರತಿವಾದಿಸಂಖ್ಯೆ: 4 ಹಾಗೂ ಇಬ್ಬರು ಮಕ್ಕಳಾದ ಅಣ್ಣಾಸಾಹೇಬ ಮತ್ತು ಬಾಹುಬಲಿ-ಪ್ರತಿವಾದಿಗಳು 5 ಮತ್ತು 6 ಇವರನ್ನು ಅಗಲಿದ್ದಾರೆ.ಭರ್ಮು ಅವರು ಸಹ ಮರಣ ಹೊಂದಿದ್ದು, 7 ನೇ ಪ್ರತಿವಾದಿಯಾದ ಅವರ ಮಗ ಪ್ರಕಾಶ್ ಅವರನ್ನು ಅಗಲಿದ್ದಾರೆ.

4. ವಾದಿಯಾದ ಸುವರ್ಣ ಇವರು ಪ್ರತಿವಾದಿಸಂಖ್ಯೆ: 1 ಸಾತಪ್ಪ ಅವರ ಮಗಳು, ಸುನಿತಾ ಮತ್ತು ಸರೋಜಿನಿ ಪ್ರತಿವಾದಿಗಳು 2 ಮತ್ತು 3 ಇವರು ಸಾತಪ್ಪ ಅವರ ಉಳಿದ ಇಬ್ಬರು ಹೆಣ್ಣು ಮಕ್ಕಳು.ಈ ದಾವೆಯನ್ನು ಮಗಳು ತನ್ನ ತಂದೆಯ ಹಾಗೂ ಕುಟುಂಬದ ಇತರ ಸದಸ್ಯರ ವಿರುದ್ಧ ಕೃಷಿ ಭೂಮಿಯ ವಿಭಜನೆಯನ್ನು ಕೋರಿ ಹೂಡಿದ್ದಾರೆ.ಅವರು ಈ ದಾವೆಯನ್ನು ಧೂಳಪ್ಪ ಅವರು ಮತ್ಯಾರೂ ಅಲ್ಲದೇ ವಾದಿಯ ಅಜ್ಜ ಆಗಿದ್ದು, ವಿವಾದದಲ್ಲಿರುವ ಭೂಮಿಯ ಗೇಣಿದಾರರಾಗಿದ್ದರು.ಅವರ ಮರಣದ ಬಳಿಕ ಆ ಕೃಷಿ ಭೂಮಿಯು ಅವರ ಗಂಡು ಮಕ್ಕಳಾದ ಪ್ರತಿವಾದಿಸಂಖ್ಯೆ: 1 (ವಾದಿಯ ತಂದೆ) ವಾದಿ ಹಾಗೂ ಆಕೆಯ ಉಳಿದ ಇಬ್ಬರು ಸಹೋದರಿಯರಾದ ಪ್ರತಿವಾದಿಸಂಖ್ಯೆ: 2 ಮತ್ತು 3 ಅವರಿಗೆ ಪಿತ್ರಾರ್ಜಿತವಾಗಿ ಬಂದಿತ್ತು.ಆದ್ದರಿಂದ, ಅವರು ಸಾತಪ್ಪ ಅವರು ಹಕ್ಕುದಾರರಾಗಿದ್ದ ಭಾಗದಲ್ಲಿ ಪಾಲು ಪಡೆಯಲು ಹಕ್ಕುಳ್ಳವರಾಗಿದ್ದರು.

5. ದಾವೆಯ ಸ್ವತ್ತುಗಳು ಪಿತ್ರಾರ್ಜಿತ ಕೂಡುಕುಟುಂಬದ ಗೇಣಿಗೆ ಪಡೆದ ಸ್ವತ್ತುಗಳಾಗಿದ್ದು, ಅವುಗಳನ್ನು ವಾದಿಯು ತನ್ನ ತಂದೆ, ಸಹೋದರಿಯರು ಹಾಗೂ ಪ್ರತಿವಾದಿಸಂಖ್ಯೆ: 4 ಆದ ರಘು ಅವರ ಪತ್ನಿ ಇವರೊಂದಿಗೆ ಪಿತ್ರಾರ್ಜಿತವಾಗಿ ಪಡೆದುಕೊಂಡಿದ್ದಾರೆ.ಆದ್ದರಿಂದ ಅವರೆಲ್ಲರೂ ದಾವೆಯ ಆಸ್ತಿಯಲ್ಲಿ 1/ 8 ರಷ್ಟು ಪಾಲು ಪಡೆಯಲು ಹಕ್ಕುಳ್ಳವರಾಗಿದ್ದಾರೆ ಎಂಬುದು ವಾದಿಯ ವಾದವಾಗಿದೆ.

6. ಧೂಳಪ್ಪ ಅವರ ನಾಲ್ಕನೆಯ ಮಗನಾದ ಭರ್ಮು ಅವರಿಗೆ ಸಂಬಂಧಪಟ್ಟಷ್ಟರಮಟ್ಟಿಗೆ ಅವರನ್ನು ಸದಲ್ಲಾದ ' ಗಿಡಗಲೆ ' ಕುಟುಂಬಕ್ಕೆ ದತ್ತು ನೀಡಲಾಗಿರುವುದರಿಂದ, ಭರ್ಮು ಅವರ ವಂಶವನ್ನು ಪ್ರತಿನಿಧಿಸಿರುವ 7 ನೇ ಪ್ರತಿವಾದಿಯು ಗೇಣಿಗೆ ಪಡೆದ ಭೂಮಿಯಲ್ಲಿ ಯಾವುದೇ ಪಾಲಿಗೆ ಹಕ್ಕುಳ್ಳವರಾಗುವುದಿಲ್ಲ ಎಂಬುದು ವಾದಿಯ ವಾದವಾಗಿದೆ.

7. ಪ್ರತಿವಾದಿಸಂಖ್ಯೆ: 1 ಸಾತಪ್ಪ ಅವರು, ವಾದಪತ್ರದ ಸಮರ್ಥನೆಗಳನ್ನು ಅಲ್ಲಗಳೆದು ಇತರ ವಿಷಯಗಳ ಜೊತೆಗೆ ಧೂಳಪ್ಪ ಅವರ ಮರಣಾನಂತರ ತಾನು ಹಾಗೂ ತನ್ನ ಮೂವರು ಸಹೋದರರು ಗೇಣಿದಾರರಾಗಿ ಅವರವರ ವೈಯಕ್ತಿಕ ಸಾಮರ್ಥ್ಯದಲ್ಲಿ ಭೂಮಿಯಲ್ಲಿ ವ್ಯವಸಾಯ ಮಾಡಿದ್ದಾರೆ ಮತ್ತು ಧೂಳಪ್ಪ ಅವರ ಮರಣದ ಸಂದರ್ಭದಲ್ಲಿ ವಾದಿಯು ಜನಿಸಿರಲಿಲ್ಲ ಎಂದು ಒಂದು ಪ್ರತ್ಯೇಕ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದಾರೆ.1961 ರ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ ಜಾರಿಗೆ ಬಂದ ನಂತರ, ಅವರು ನಮೂನೆಸಂಖ್ಯೆ: 1 ರಲ್ಲಿ ಸ್ವತಃ ಹಾಗೂ ಅವರ ಸಹೋದರರು ಮತ್ತು ತಾಯಿ ಕಲ್ಲವ್ವ ಅವರಿಗಾಗಿ ಸಹ ಅಧಿಭೋಗದ ಹಕ್ಕುಗಳನ್ನು ಕ್ಲೇಮು ಮಾಡಿ ಒಂದು ಅರ್ಜಿಯನ್ನು ಸಲ್ಲಿಸಿದ್ದರು.ಭೂ ನ್ಯಾಯಾಧಿಕರಣವು ಸದರಿ ಅರ್ಜಿಯನ್ನು ಪರಿಗಣಿಸಿ, ಪ್ರತಿಯೊಬ್ಬರಿಗೂ 1/ 4 ರಷ್ಟು ಪಾಲು ಸಿಗುವುದನ್ನು ಸ್ಪಷ್ಟಗೊಳಿಸಿ, ಅಧಿಭೋಗದ ಹಕ್ಕುಗಳನ್ನು ನೀಡಿತು.ಇದಲ್ಲದೆ, ಅವರು ನಮೂನೆಸಂಖ್ಯೆ: 7 ನ್ನು ಸಲ್ಲಿಸುವ ಸಮಯದಲ್ಲಿ ಅವರ ಹಿರಿಯ ಸಹೋದರ ದೇವು ಅವರು ಅದಾಗಲೇ ಮರಣ ಹೊಂದಿದ್ದು, ಗೇಣಿಗೆ ಪಡೆದ ಭೂಮಿಯ ನಿರ್ವಹಣೆ ಹಾಗೂ ವ್ಯವಸಾಯವನ್ನು ನೋಡಿಕೊಳ್ಳುತ್ತಿದ್ದುದು ಅವರೇ ಆಗಿದ್ದರು ಮತ್ತು ದಾವೆಯಲ್ಲಿರುವ ಸ್ವತ್ತುಗಳು ಅವರ ಹಾಗೂ ಅವರ ಸಹೋದರರ ಸ್ವಯಾರ್ಜಿತ ಸ್ವತ್ತುಗಳಾಗಿರುವುದರಿಂದ, ಈ ಸ್ವತ್ತುಗಳ ವಿಷಯವಾಗಿ ವಾದಿಯು ಯಾವುದೇ ರೀತಿಯಲ್ಲಿ ಸಂಬಂಧ ಹೊಂದಿರುವುದಿಲ್ಲವೆಂದು ವಾದಿಸಿದ್ದಾರೆ.

8. ಹೀಗೆ, ಪ್ರತಿವಾದಿಸಂಖ್ಯೆ: 1 ಅವರು ಗೇಣಿಗೆ ಪಡೆದ ಭೂಮಿಗೆ ಸಂಬಂಧಿಸಿದಂತೆ ವಿಭಜನೆಯನ್ನು ಕೋರಿರುವ ವಾದಿಯ ಹಕ್ಕನ್ನು ಅಲ್ಲಗಳೆದಿದ್ದಾರೆ.ವಾದಿಯ ಸಹೋದರ ಭರ್ಮು ಅವರನ್ನು ಯಾವುದೇ ಸಮಯದಲ್ಲೂ ದತ್ತು ನೀಡಲಾಗಿಲ್ಲ ಎಂಬ ವಾದಿಯ ಸಮರ್ಥನೆಯನ್ನು ಮೊದಲನೇ ಪ್ರತಿವಾದಿಯು ಪ್ರಬಲವಾಗಿ ಅಲ್ಲಗಳೆದಿದ್ದಾರೆ.

9. ವಾದಿಯ ಸಹೋದರಿಯರಾದ ಪ್ರತಿವಾದಿ 2 ಮತ್ತು 3 ಇವರು ವಾದಿಯ ವಾದವನ್ನು ಬೆಂಬಲಿಸಿಲ್ಲವಾದರೂ, ಅವರ ಲಿಖಿತ ಹೇಳಿಕೆಯಲ್ಲಿ, ವಾದಿಯು ಸ್ವತ್ತಿನಲ್ಲಿ ಪಾಲು ಪಡೆಯಲು ಹಕ್ಕುಳ್ಳವನಾಗಿದ್ದಾನೆ ಎಂದು ನ್ಯಾಯಾಲಯವು ನಿರ್ಣಯಕ್ಕೆ ಬಂದರೆ, ಅವರಿಗೂ ಸಹ ಅವರ ಕಾನೂನುಸಮ್ಮತ ಪಾಲನ್ನು ಮಂಜೂರು

ಮಾಡಬಹುದು ಎಂದು ಹೇಳಿದ್ದಾರೆ.ಪ್ರತಿವಾದಿ 4, 5 ಮತ್ತು 6 ಇವರು, ವಾದಪತ್ರದ ಸಮರ್ಥನೆಗಳನ್ನು ಅಲ್ಲಗಳೆದು, ದಾವೆಯನ್ನು ವಜಾಗೊಳಿಸುವಂತೆ ನ್ಯಾಯಾಲಯವನ್ನು ವಿನಂತಿಸಿ ಸಾಮಾನ್ಯ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದಾರೆ.

10. ಅದೇ ರೀತಿ, ಪ್ರತಿವಾದಿಸಂಖ್ಯೆ: 7 ಅವರು, ವಾದಪತ್ರದ ಸಮರ್ಥನೆಗಳನ್ನು ಅಲ್ಲಗಳೆದಿದ್ದಾರೆ ಮತ್ತು ಅವರ ತಂದೆಯವರನ್ನು ' ಗಿಡಗಲೆ ' ಕುಟುಂಬಕ್ಕೆ ದತ್ತು ನೀಡಿಲ್ಲವೆಂದು ಮತ್ತು ಅವರೂ ಸಹ ದಾವೆಯನ್ನು ವಜಾಗೊಳಿಸಲು ಅಪೇಕ್ಷಿಸಿದ್ದಾರೆ ಎಂದು ನಿರ್ದಿಷ್ಟವಾಗಿ ವಾದಿಸಿದ್ದಾರೆ.

11. ವಾದಗಳನ್ನಾಧರಿಸಿ ಅಧಿವಿಚಾರಣಾ ನ್ಯಾಯಾಲಯವು, ಎರಡು ಹೆಚ್ಚುವರಿ ವಿವಾದಾಂಶಗಳನ್ನು ಒಳಗೊಂಡಂತೆ ಎಂಟು ವಿವಾದಾಂಶಗಳನ್ನು ರೂಪಿಸಿದೆ, ಅವು ಈ ಕೆಳಗಿನಂತಿವೆ:

1. ದಾವೆಯಲ್ಲಿರುವ ಸ್ವತ್ತುಗಳು ಕೂಡು ಕುಟುಂಬದ ಸ್ವತ್ತುಗಳೆಂದು ವಾದಿಯು ಸಾಬೀತುಪಡಿಸಿದ್ದಾರೆಯೇ?

2. ದಾವೆಯಲ್ಲಿರುವ ಸ್ವತ್ತುಗಳು ಪ್ರತಿವಾದಿ 1 ಇವರ ಸ್ವಯಾರ್ಜಿತ ಸ್ವತ್ತುಗಳೆಂದು ಪ್ರತಿವಾದಿಗಳು ಸಾಬೀತುಪಡಿಸಿರುವರೇ?

3. ಪಕ್ಷಕಾರರ ತಪ್ಪು ಸೇರ್ಪಡೆಗಾಗಿ ಹಾಗೂ ಅಗತ್ಯ ಪಕ್ಷಕಾರರನ್ನು ಸೇರಿಸದೇ ಇರುವುದಕ್ಕೆ ದಾವೆಯು ದೋಷಯುಕ್ತವಾಗಿದೆಯೇ?

4. ದಾವೆಯ ಮೌಲ್ಯನಿರ್ಣಯವನ್ನು ಸರಿಯಾಗಿ ಮಾಡಲಾಗಿಲ್ಲವೇ ಮತ್ತು ಪಾವತಿಸಿದ ನ್ಯಾಯಾಲಯ ಶುಲ್ಕವು ಕಡಿಮೆಯಾಗಿದೆಯೇ?

5. ವಿಭಜನೆ ಮತ್ತು ಪ್ರತ್ಯೇಕ ಸ್ವಾಧೀನತೆಯ ಮಾರ್ಗದಿಂದ ದಾವೆಯಲ್ಲಿರುವ ಸ್ವತ್ತುಗಳಲ್ಲಿ ವಾದಿಯು ನ್ಯಾಯಸಮ್ಮತವಾದ ಪಾಲನ್ನು ಹೊಂದಲು ಹಕ್ಕುದಾರರಾಗಿದ್ದಾರೆಯೇ?

6. ಆದೇಶ ಅಥವಾ ಡಿಕ್ರಿ ಏನು?

ಹೆಚ್ಚುವರಿ ವಿವಾದಾಂಶಗಳು:

1. ಪ್ರತಿವಾದಿಸಂಖ್ಯೆ: 4 ರಿಂದ 6 ಇವರು ಮೃತ ಭರ್ಮ್ಯ ಅವರನ್ನು ದತ್ತು ನೀಡಲಾಗಿಲ್ಲ ಎಂದು ಸಾಬೀತುಪಡಿಸುತ್ತಾರೆಯೇ?

2. ಪ್ರತಿವಾದಿಸಂಖ್ಯೆ: 1 ಇವರ ಜೀವಿತಾವಧಿಯಲ್ಲಿ ದಾವೆಯು ಸಮರ್ಥನೀಯವಾಗಿರಲಿಲ್ಲವೆ?

12. ವಾದಿಯು ತನ್ನ ಮೊಕದ್ದಮೆಯ ಸಮರ್ಥನೆಯಲ್ಲಿ, ಸ್ವತಃ ಪ್ರಾ.ಸಾ .1 ಆಗಿ ಪರೀಕ್ಷೆಗೆ ಒಳಪಟ್ಟಿದ್ದಾರೆ ಹಾಗೂ ನಿಶಾನೆ ಪಿ .1 ರಿಂದ ಪಿ .15 ಇವುಗಳನ್ನು ಹಾಜರುಪಡಿಸಿ ಗುರುತಿಸಿದ್ದಾರೆ.ಪ್ರತಿವಾದಿಸಂಖ್ಯೆ: 1 ಸಾತಪ್ಪ ಅವರು ಪ್ರತಿವಾದಿ ಸಾಕ್ಷಿ -1 ಆಗಿ ಸ್ವತಃ ಪರೀಕ್ಷೆಗೊಳಪಟ್ಟಿದ್ದಾರೆ ಮತ್ತು ನಿಶಾನೆ ಡಿ .1 ರಿಂದ ಡಿ .31 ಇವುಗಳನ್ನು ಹಾಜರುಪಡಿಸಿ, ಗುರುತಿಸಿದ್ದಾರೆ.ಬೇರೆ ಯಾವ ಸಾಕ್ಷಿಯನ್ನು ಪರೀಕ್ಷಿಸಿರುವುದಿಲ್ಲ.

13. ವಿಚಾರಣಾ ನ್ಯಾಯಾಲಯವು, ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷಿಗಳನ್ನು ಪುರಸ್ಕರಿಸಿ, ದಾವೆಯಲ್ಲಿರುವ ಸ್ವತ್ತುಗಳು ಕೂಡು ಕುಟುಂಬದ ಸ್ವತ್ತುಗಳೆಂದು ವಾದಿಯು ಯಶಸ್ವಿಯಾಗಿ ಸಾಬೀತುಪಡಿಸಿದ್ದಾರೆಂದು, ಆದ್ದರಿಂದ, ಅವರು ಸದರಿ ಸ್ವತ್ತಿನಲ್ಲಿ ನ್ಯಾಯಸಮ್ಮತವಾದ ಪಾಲಿಗೆ ಹಕ್ಕುಳ್ಳವರಾಗಿದ್ದಾರೆಂದು ನಿರ್ಣಯಕ್ಕೆ ಬಂದಿದೆ.ಇದಲ್ಲದೆ, ವಿಚಾರಣಾ ನ್ಯಾಯಾಲಯವು, ದಾವೆಯಲ್ಲಿರುವ ಸ್ವತ್ತುಗಳನ್ನು ಪ್ರತಿವಾದಿಸಂಖ್ಯೆ: 1 ಇವರ ಸ್ವಯಾರ್ಜಿತ ಸ್ವತ್ತುಗಳೆಂದು ಸಾಬೀತುಪಡಿಸುವಲ್ಲಿ ಪ್ರತಿವಾದಿಗಳು ವಿಫಲರಾಗಿದ್ದಾರೆ ಎಂದು ನಿರ್ಣಯಕ್ಕೆ ಬಂದಿದೆ.

14. ಹೆಚ್ಚುವರಿ ವಿವಾದಾಂಶಸಂಖ್ಯೆ: 1 ಕ್ಕೆ ಸಂಬಂಧಪಟ್ಟಷ್ಟರಮಟ್ಟಿಗೆ, ಮೃತ ಭರ್ಮ್ಯ ಅವರನ್ನು ದತ್ತು ನೀಡಲಾಗಿಲ್ಲವೆಂದು ಸಾಬೀತುಪಡಿಸುವಲ್ಲಿ ಪ್ರತಿವಾದಿ 4 ರಿಂದ 6 ಇವರು ವಿಫಲರಾಗಿದ್ದಾರೆಂದು ವಿಚಾರಣಾ

ನ್ಯಾಯಾಲಯವು ನಿರ್ಣಯಿಸಿದೆ.ಈ ಹಂತದಲ್ಲೂ ಸಹ ಹೆಚ್ಚುವರಿ ವಾದಾಂಶವನ್ನು ನಕಾರಾತ್ಮಕ ರೂಪದಲ್ಲಿ ಈ ಮುಂದಿನ ರೀತಿಯಲ್ಲಿ ರೂಪಿಸಲಾಗಿದೆ ಎಂದು ಗಮನಿಸುವುದು ಅವಶ್ಯವಾಗಿದೆ:

*1. ಮೃತ ಭರ್ಮ್ಯ ಅವರನ್ನು ದತ್ತು ನೀಡಲಾಗಿಲ್ಲವೆಂದು ಪ್ರತಿವಾದಿಸಂಖ್ಯೆ: 4 ರಿಂದ 6 ಇವರು ಸಾಬೀತುಪಡಿಸುವರೇ?"

15. ವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪು ಮತ್ತು ಡಿಕ್ರಿಯಿಂದ ಬಾಧಿತರಾಗಿ, ಪ್ರತಿವಾದಿಸಂಖ್ಯೆ: 1- ಸಾತಪ್ಪ ಅವರು, ಆರ್.ಎಫ್.ಎ.ಸಂಖ್ಯೆ: 4177/2012 ನ್ನು ಸಲ್ಲಿಸಿದ್ದಾರೆ.ಶ್ರೀ ಸಂಗ್ರಾಮ್ ಎಸ್. ಕುಲಕರ್ಣಿ ಅವರು ಈ ಮೊಕದ್ದಮೆಯಲ್ಲಿ ಅಪೀಲುದಾರರ ಪರವಾಗಿ ಹಾಜರಾಗಿ, ಅವರ ವಾದಗಳನ್ನು ಮಂಡಿಸಿದ್ದಾರೆ.

16. ಆರ್.ಎಫ್.ಎ.ಸಂಖ್ಯೆ: 4179/2012 ನ್ನು 7 ನೇ ಪ್ರತಿವಾದಿ ಪ್ರಕಾಶ್ ಅವರು ಸಲ್ಲಿಸಿದ್ದಾರೆ ಮತ್ತು ಶ್ರೀ ವಿವೇಕ್ ಎ. ವಾಜಪೇರವರು, ಅಪೀಲುದಾರರ ಪರವಾಗಿ ಹಾಜರಾಗಿರುತ್ತಾರೆ.ಶ್ರೀಮತಿ ಕೆ.ಎಸ್. ಹೇಮಲೇಖಾರವರು ವಾದಿ ಪ್ರತ್ಯರ್ಜಿದಾರಸಂಖ್ಯೆ: 1 ಇವರ ಪರವಾಗಿ ತಮ್ಮ ವಿಸ್ತೃತ ವಾದಗಳನ್ನು ಮಂಡಿಸಿದ್ದಾರೆ.

17. ಮಾನ್ಯ ನ್ಯಾಯವಾದಿಗಳಾದ ಶ್ರೀ ಸಂಗ್ರಾಮ್ ಎಸ್. ಕುಲಕರ್ಣಿ ಅವರು, ವಾದಿಯು ದಾವೆಯಲ್ಲಿರುವ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂಬ ಪಾಲು ಹೊಂದಿರುವ ಆಧಾರದ ಮೇಲೆ ಮುಂದುವರಿಯುವಲ್ಲಿ ವಿಚಾರಣಾ ನ್ಯಾಯಾಲಯವು ಗಂಭೀರ ಪ್ರಮಾದ ಎಸಗಿದೆ ಎಂದು ವಾದಿಸಿದ್ದಾರೆ.ಅಪೀಲುದಾರ- ಪ್ರತಿವಾದಿಸಂಖ್ಯೆ: 1 ಇವರ ಮಗಳಾಗಿರುವ ವಾದಿಯು ಸಹ ದಾಯಾದಿಯಾಗಲೀ ಅಥವಾ ಪ್ರತಿವಾದಿಸಂಖ್ಯೆ: 1 ಇವರು ತಮ್ಮ ಸಹೋದರರು ಮತ್ತು ತಾಯಿಯ ಜೊತೆಗೆ ನಿರುಪಾಧಿಕ ಹಕ್ಕನ್ನು ಹೊಂದಿರುವ ಗೇಣಿಗೆ ಪಡೆದ ಭೂಮಿಯಲ್ಲಿ ಯಾವುದೇ ಪಾಲನ್ನು ಹೊಂದಿದ ಕೇಮಿಗೆ ಹಕ್ಕುಳ್ಳ ವ್ಯಕ್ತಿಯಾಗಲಿ ಆಗಿಲ್ಲವೆಂದು ವಾದಿಸಿದ್ದಾರೆ.ಈ ನಿವೇದನೆಯನ್ನು ವಿಸ್ತರಿಸಿ ಅವರು, ಧೂಳಪ್ಪ (ಮೊದಲನೇ ಪ್ರತಿವಾದಿಯ ತಂದೆ) ಅವರಿಂದ ಮೊದಲನೇ ಪ್ರತಿವಾದಿ/ಅಪೀಲುದಾರರು ತಮ್ಮ ಸಹೋದರರು ಮತ್ತು ತಾಯಿಯ ಗೇಣಿ ಹಕ್ಕುಗಳನ್ನು ಪಿತ್ರಾರ್ಜಿತವಾಗಿ ಪಡೆದಿದ್ದಾರೆ ಎಂದು ಭಾವಿಸಿದರೂ ಸಹ, ಅದು ಸದರಿ ಗೇಣಿಗೆ ಪಡೆದ ಭೂಮಿಯಲ್ಲಿ ಯಾವುದೇ ಹಕ್ಕನ್ನು ಕ್ಲೇಮು ಮಾಡಲು ವಾದಿಯ ಪರವಾಗಿ ಯಾವುದೇ ಹಕ್ಕನ್ನು ಸೃಜಿಸುವುದಿಲ್ಲವೆಂದು ವಾದಿಸಿದ್ದಾರೆ.

18. ವಾದಿಯ ಮುಂದುವರಿದ ವಾದವೇನೆಂದರೆ, ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 ಜಾರಿಗೆ ಬಂದ ನಂತರ ಮತ್ತು 1974 ರ ಅಧಿನಿಯಮದ ಅಡಿಯಲ್ಲಿ ಗೊತ್ತುಪಡಿಸಲಾದ ದಿನಾಂಕದಂದು (DD_0_DD) ಮೊದಲ ಪ್ರತಿವಾದಿ ಸಾತಪ್ಪರವರು ತಮ್ಮ ಸಹೋದರರು ಹಾಗೂ ತಾಯಿಯ ಜೊತೆಗೆ ವಾಸ್ತವವಾಗಿ ಗೇಣಿದಾರರಾಗಿ ಭೂಮಿಯ ವ್ಯವಸಾಯ ಮಾಡುತ್ತಿದ್ದರಾದ್ದರಿಂದ, ಅಧಿಭೋಗದ ಹಕ್ಕುಗಳ ಮಂಜೂರಾತಿಯನ್ನು ಕೋರುವ ನಿರುಪಾಧಿಕ ಹಕ್ಕನ್ನು ಅವರು ಪಡೆದಿದ್ದರು.ಆದ್ದರಿಂದ ಅಧಿಭೋಗದ ಹಕ್ಕುಗಳು ಒಮ್ಮೆ ಅವರ ಹೆಸರುಗಳಲ್ಲಿ ನೋಂದಣಿಯಾದ ಕೂಡಲೇ, ಅವರು ಅನುಭವಿಸಿದ ಹಕ್ಕು ನಿರುಪಾಧಿಕವಾಯಿತು:ಅವರ ಪಾಲಿನ ವ್ಯಾಪ್ತಿಯಲ್ಲಿರುವ ಸ್ವತ್ತು ಅವರ ಸ್ವಯಾರ್ಜಿತ ಸ್ವತ್ತಾಗುತ್ತದೆ ಮತ್ತು ಆದುದರಿಂದಾಗಿ ಮೊದಲನೇ ಪ್ರತಿವಾದಿಯ ಮಗಳಾಗಿರುವ ವಾದಿಯು ಅವರ ಜೀವಿತಾವಧಿಯಲ್ಲಿ ಅವರ ವಿರುದ್ಧ ಆಸ್ತಿ ವಿಭಜನೆಗಾಗಿ ದಾವೆ ಹೂಡುವ ಮೂಲಕ ಯಾವುದೇ ಪಾಲು ಕೇಳಲು ಹಕ್ಕುದಾರರಾಗಿರಲಿಲ್ಲ.

19. ಈ ವಾದಗಳಿಗೆ ಪ್ರತಿಯಾಗಿ ಪ್ರತಿವಾದಿಗಳ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀಮತಿ ಕೆ.ಎಸ್. ಹೇಮಲೇಖಾ ಅವರು, ಗೇಣಿ ಹಕ್ಕುಗಳು ಅನುವಂಶೀಯ ಹಕ್ಕುಗಳಾಗಿರುವುದರಿಂದ ವಾದಿಯ ತಂದೆ (ಇದರಲ್ಲಿನ ಅಪೀಲುದಾರರು) ಗೇಣಿ ಹಕ್ಕುಗಳನ್ನು ತಮ್ಮ ತಂದೆಯಿಂದ ಅನುವಂಶೀಯವಾಗಿ ಪಡೆದಿದ್ದಾರೆ ಮತ್ತು ಅದರಿಂದಾಗಿ, ಆ ಸ್ವತ್ತುಗಳು ಅವರ ಸ್ವಯಾರ್ಜಿತ ಸ್ವತ್ತುಗಳಾಗುವುದಿಲ್ಲ:ದಾವೆಯಲ್ಲಿರುವ ಸ್ವತ್ತು ಅನುವಂಶೀಯ ಸ್ವತ್ತುಗಳ ಲಕ್ಷಣಗಳನ್ನು ಪಡೆದುಕೊಂಡಿದ್ದು, ಅದರಲ್ಲಿ ವಾದಿಯು ಜನ್ಮಜಾತ ಹಕ್ಕನ್ನು ಹೊಂದಿರುವರಾದ್ದರಿಂದ, ತಮ್ಮ ನ್ಯಾಯಸಮ್ಮತ ಪಾಲಿಗೆ ಸಂಬಂಧಿಸಿದಂತೆ ವಿಭಜನೆಯನ್ನು ಕೋರಲು ಅವರು ಹಕ್ಕುಳ್ಳವರಾಗಿದ್ದಾರೆ ಎಂದು ವಾದಿಸಿದ್ದಾರೆ.ಅವರು, ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 ರ 24 ನೇ ಪ್ರಕರಣದಲ್ಲಿ ಇರುವ ಉಪಬಂಧಗಳು ಮತ್ತು ಅದರ 2 ( 1) ನೇ ಪ್ರಕರಣದಲ್ಲಿ ಇರುವ ' ಕುಟುಂಬ ' ಎಂಬ ಪದದ ಪರಿಭಾಷೆಯ ಬಗ್ಗೆ ನಮಗೆ ತಿಳಿಸಿದ್ದಾರೆ.

20. ಸಂಬಂಧಪಟ್ಟ ಅಪೀಲಿನಲ್ಲಿ ಮಾನ್ಯ ನ್ಯಾಯವಾದಿಗಳಾದ ಶ್ರೀ ವಿವೇಕ್ ಎ. ವಾಜಪೇಯವರು, ' ಪ್ರತಿವಾದಿಸಂಖ್ಯೆ: 4 ಮತ್ತು 6 ಇವರು ಮೃತ ಭರ್ಮು ಅವರನ್ನು ದತ್ತು ನೀಡಲಾಗಿಲ್ಲ ಎಂದು ಸಾಬೀತು ಪಡಿಸುತ್ತಾರೆಯೇ? 'ಎಂಬುದಾಗಿ ಹೆಚ್ಚುವರಿ ವಿವಾದಾಂಶಸಂಖ್ಯೆ: 1 ರಲ್ಲಿ ನಕಾರಾತ್ಮಕ ವಿವಾದಾಂಶದ ಕುರಿತು ವಿಚಾರಣಾ ನ್ಯಾಯಾಲಯವು ದಾಖಲಿಸಿರುವ ನಿರ್ಣಯಗಳು ಆಧಾರರಹಿತ ಮತ್ತು ತರ್ಕಕ್ಕೆ ವಿರುದ್ದವಾಗಿರುವುದರಿಂದ, ಅವು ತಳ್ಳಿಹಾಕಲು ಯೋಗ್ಯವಾಗಿವೆ ಎಂದು ವಾದಿಸಿದ್ದಾರೆ.

21. ಸಂಬಂಧಪಟ್ಟ ನ್ಯಾಯವಾದಿಗಳು ಮಂಡಿಸಿದ ಈ ಮೇಲೆ ಹೇಳಿರುವ ವಾದಗಳ ಹಿನ್ನೆಲೆಯಲ್ಲಿ ಮತ್ತು ದಾಖಲೆಯಲ್ಲಿರುವ ಎಲ್ಲಾ ಸಾಕ್ಷ್ಯಗಳ ಜಾಗರೂಕ ಪರಿಶೀಲನೆಯ ನಂತರ, ಈ ಕೆಳಗಿನ ಅಂಶಗಳು ನಮ್ಮ ಪರಿಗಣನೆಗಾಗಿ ಉದ್ಭವಿಸಿವೆ:

1) ಇದರಲ್ಲಿನ ವಾದಿ-ಪ್ರತಿವಾದಿಸಂಖ್ಯೆ: 1 ಇವರು, ಚಿಕ್ಕೋಡಿಯ ಭೂ ನ್ಯಾಯಾಧಿಕರಣವು ಅವರ ತಂದೆ ಪ್ರತಿವಾದಿಸಂಖ್ಯೆ: 1 (ಸಾತಪ್ಪ ಧೂಳಪ್ಪ ಚಂದಗಡೆ) ಪರವಾಗಿ ನೀಡಲಾಗಿರುವ ಅಧಿಭೋಗದ ಹಕ್ಕುಗಳಿಗೆ ಸಂಬಂಧಿಸಿದಂತೆ ದಾವೆ ನಿಗದಿತ ಸ್ವತ್ತುಗಳ ಸಂಬಂಧದಲ್ಲಿ ಪಾಲು ಕೇಳಲು ಹಕ್ಕುಳ್ಳವರಾಗಿರುವರೇ?

ii) ವಿಚಾರಣಾ ನ್ಯಾಯಾಲಯವು, ವಾದಿಯ ಪರವಾಗಿ ದಾವೆ ನಿಗದಿತ ಸ್ವತ್ತುಗಳಲ್ಲಿ 1/ 8 ರಷ್ಟು ಪಾಲು ಮಂಜೂರು ಮಾಡಿ, ದಾವೆಯನ್ನು ಡಿಕ್ಕಿ ಮಾಡಿರುವ ನಿರ್ಣಯವು ಸಮರ್ಪಕ ಹಾಗೂ ನ್ಯಾಯ ಸಮ್ಮತವಾಗಿದೆಯೇ?

iii) ಪ್ರತಿವಾದಿಸಂಖ್ಯೆ: 7 ಇವರ ತಂದೆ ಮೃತ ಶ್ರೀ ಭರ್ಮು ಚಂದಗಡೆ ಅವರನ್ನು ದತ್ತು ನೀಡಲಾಗಿದ್ದು, ಅದರಿಂದಾಗಿ ದಾವೆ ನಿಗದಿತ ತುಗಳಲ್ಲಿ ಯಾವುದೇ ಪಾ ಲಾ ಪ ಡೆ ಲಾ 3 ಹಕ್ಕುಳ್ಳವರಾಗಿರುವುದಿಲ್ಲ ಎಂಬ ನಿರ್ಣಯವನ್ನು ದಾಖಲಿಸುವಲ್ಲಿ ವಿಚಾರಣಾ ನ್ಯಾಯಾಲಯವು ಯಾವುದೇ ಕಾನೂನುಬಾಹಿರ ಕ್ರಮವನ್ನು ಕೈಗೊಂಡಿದೆಯೇ?

22. ಉಲ್ಲೇಖಾಂಶ ( i) ಮತ್ತು(ii):ಈ ಎರಡು ಅಂಶಗಳು ಪರಸ್ಪರ ಸಂಬಂಧಿಸಿರುವುದರಿಂದ, ಅವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ವಿವಾದದಲ್ಲಿರುವ ಭೂಮಿಗೆ ಸಂಬಂಧಿಸಿದಂತೆ ಚಿಕ್ಕೋಡಿಯ ಭೂ ನ್ಯಾಯಾಧಿಕರಣವು ಮಂಜೂರು ಮಾಡಿರುವ ಗೇಣಿ ಹಕ್ಕುಗಳಿಗೆ ಸಂಬಂಧಿಸಿದ ಅತ್ಯಾವಶ್ಯಕ ಸಂಗತಿಗಳು ವಿವಾದಕ್ಕೆ ಒಳಗಾಗಿಲ್ಲ.ವಾದಿಯ ಅಜ್ಜ ಹಾಗೂ ಪ್ರತಿವಾದಿಸಂಖ್ಯೆ: 1 ಇವರ ತಂದೆ ಆಗಿರುವ ಮೃತ ಶ್ರೀ ಧೂಳಪ್ಪ ಅಲಿಯಾಸ್ ಧೂಳು, ಸಾತಪ್ಪ ಚಂದಗಡೆ ಅವರ ಮಗ ಇವರು, ವಿವಾದದಲ್ಲಿರುವ ಭೂಮಿಯ ಮೂಲ ಗೇಣಿದಾರರಾಗಿದ್ದರು.ಅವರು ಪತ್ನಿ ಹಾಗೂ ನಾಲ್ಕು ಗಂಡು ಮಕ್ಕಳನ್ನು ಅಗಲಿ 1960 ರಲ್ಲಿ ಮರಣ ಹೊಂದಿರುವರು.ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮವು ಜಾರಿಗೆ ಬಂದ ನಂತರ, ವಾದಿಯ ತಂದೆಯಾಗಿರುವ ಪ್ರತಿವಾದಿಸಂಖ್ಯೆ: 1 ಸಾತಪ್ಪ ಧೂಳಪ್ಪ ಚಂದಗಡೆ ಇವರು, ತಮಗಾಗಿ ಹಾಗೂ ತಮ್ಮ ಸಹೋದರರು ಮತ್ತು ತಾಯಿಯ ಪರವಾಗಿ ಅಧಿಭೋಗದ ಹಕ್ಕುಗಳನ್ನು ಕೋರಿ ನಮೂನೆಸಂಖ್ಯೆ: 7 ರಲ್ಲಿ ಅರ್ಜಿ ಸಲ್ಲಿಸಿದರು.ಚಿಕ್ಕೋಡಿಯ ಭೂ ನ್ಯಾಯಾಧಿಕರಣವು,ದಿನಾಂಕ: 11.09.1981 ರಂದು ವಿವಾದದಲ್ಲಿರುವ ಭೂಮಿಯ ಸಂಬಂಧದಲ್ಲಿ ಅಧಿಭೋಗದ ಹಕ್ಕುಗಳನ್ನು ನೀಡಿತು.ಅದರಲ್ಲಿ ಎಲ್ಲಾ ಮೂವರು ಸಹೋದರರು ಮತ್ತು ಮರಣ ಹೊಂದಿದ ಧೂಳಪ್ಪ ಅವರ ವಿಧವಾ ಪತ್ನಿ ಇವರು ಮಂಜೂರಾದ ಭೂಮಿಗೆ ಸಂಬಂಧಿಸಿದಂತೆ 1/ 4 ರಷ್ಟು ಪಾಲನ್ನು ಪಡೆಯಲು ಹಕ್ಕುಳ್ಳವರಾಗಿದ್ದಾರೆ ಎಂದು ಸ್ಪಷ್ಟಪಡಿಸಲಾಗಿದೆ.ಮೂಲ ಗೇಣಿದಾರರಾದ ಧೂಳಪ್ಪ ಅಲಿಯಾಸ್ ಧೂಳು ಅವರ ಮರಣಾನಂತರ 1960 ರಲ್ಲಿ ಪ್ರತಿವಾದಿಸಂಖ್ಯೆ: 1 ಸಾತಪ್ಪ ಅವರು ತಮ್ಮ ಮೂವರು ಸಹೋದರರು ಹಾಗೂ ತಾಯಿಯ ಜೊತೆಗೆ ಧೂಳಪ್ಪ ಅವರ ಪರವಾಗಿ ಮಂಜೂರಾಗಿದ್ದ ಗೇಣಿ ಹಕ್ಕುಗಳಿಗೆ ಉತ್ತರಾಧಿಕಾರಿಯಾದರು.ಒಪ್ಪಿಕೊಂಡಿರುವಂತೆ, ಇದರಲ್ಲಿನ ವಾದಿ-ಪ್ರತಿವಾದಿಸಂಖ್ಯೆ: 1 ಇವರು ಆ ಸಮಯದಲ್ಲಿ ಜನಿಸಿರಲಿಲ್ಲ.ಆದ್ದರಿಂದ, ದಾವೆ ನಿಗದಿತ ಸ್ವತ್ತುಗಳಲ್ಲಿ ಯಾವುದೇ ಜನ್ಮಜಾತ ಹಕ್ಕು ಅಥವಾ ಪಾಲನ್ನು ಕ್ಲೇಮು ಮಾಡುವ ವಾದಿಯ ಪ್ರಶ್ನೆಯನ್ನು ತಳ್ಳಿಹಾಕಲಾಗಿದೆ.ಅವರು 1960 ನೇ ಇಸವಿಯಲ್ಲಿ ಜನಿಸಿದ್ದರೂ ಸಹ, ಅಂದಿನ ಕಾನೂನಿನ ಪ್ರಕಾರ, ಅವರು ಆ ಸಮಯದಲ್ಲಿ ಸಹ-ದಾಯಾದಿಯಾಗಿರಲಿಲ್ಲವೆಂಬಷ್ಟರ ಮಟ್ಟಿಗೆ ಅವರಿಗೆ ಸದರಿ ಸ್ವತ್ತಿನಲ್ಲಿ ಯಾವುದೇ ಜನ್ಮಜಾತ ಹಕ್ಕುಗಳು ದೊರೆಯುವುದಿಲ್ಲ, 1974 ರಲ್ಲಿ, ನಿರ್ಧರಣಾ ದಿನಾಂಕದಂದು (ಕಟ್-ಆಫ್ ಡೇಟ್), ಅಧಿಭೋಗದ ಹಕ್ಕುಗಳನ್ನು

ಕೋರಿ ನಮೂನೆಸಂಖ್ಯೆ: 7 ರಲ್ಲಿ ಅರ್ಜಿ ಸಲ್ಲಿಸಲು ಗೇಣಿದಾರರ ಪರವಾಗಿ ಹಕ್ಕುಗಳು ಪ್ರದಾನವಾದಾಗ, ಗೇಣಿದಾರರಾದ ಪ್ರತಿವಾದಿಸಂಖ್ಯೆ: 1 (ಸಾತಪ್ಪ ಧೂಳಪ್ಪ ಚಂದಗಡೆ), ಅವರ ಸಹೋದರರು ಹಾಗೂ ತಾಯಿಯೊಂದಿಗೆ ಭೂ ನ್ಯಾಯಾಧಿಕರಣದ ಮುಂದೆ ಅರ್ಜಿಯನ್ನು ಸಲ್ಲಿಸಿದರು.ಜಂಟಿಯಾಗಿ ಅವರ ಪರವಾಗಿ ಅಧಿಭೋಗದ ಹಕ್ಕುಗಳನ್ನು ಮಂಜೂರು ಮಾಡುವಾಗ, ಭೂ ನ್ಯಾಯಾಧಿಕರಣವು, ಮಂಜೂರಾದ ಭೂಮಿಯಲ್ಲಿ ಪ್ರತಿಯೊಬ್ಬರೂ 1/ 4 ರಷ್ಟು ಪಾಲಿಗೆ ಹಕ್ಕುಳ್ಳವರಾಗಿದ್ದಾರೆ ಎಂದು ಸ್ಪಷ್ಟಗೊಳಿಸಿದೆ.ಕುಟುಂಬ ಸದಸ್ಯರಾಗಿರುವ ಎಂದರೆ-ಸಾತಪ್ಪ, ಅವರ ಸಹೋದರರು ಹಾಗೂ ಅವರ ತಾಯಿ ಗೇಣಿ ಹಕ್ಕುಗಳನ್ನು ಪಿತ್ರಾರ್ಜಿತವಾಗಿ ಪಡೆದ ವ್ಯಕ್ತಿಗಳಾಗಿರುವರು ಮತ್ತು ನಮೂನೆಸಂಖ್ಯೆ: 7 ನ್ನು ಸಲ್ಲಿಸಿ ಅಧಿಭೋಗದ ಹಕ್ಕುಗಳನ್ನು ಕ್ಲೇಮು ಮಾಡಲು ಹಕ್ಕುಳ್ಳ ವ್ಯಕ್ತಿಗಳೆಂದು ಅವರನ್ನು ಗುರುತಿಸಲಾಗಿದೆ.ಇದರಲ್ಲಿನ ಪ್ರತಿವಾದಿಸಂಖ್ಯೆ: 1-ಸಾತಪ್ಪ ಧೂಳಪ್ಪ ಚಂದಗಡೆಯವರ ಮಗಳಾದ ವಾದಿಯು ಗೇಣಿ ಹಕ್ಕುಗಳಿಗೆ ಉತ್ತರಾಧಿಕಾರಿಯೂ ಆಗಿರಲಿಲ್ಲ ಅಥವಾ ತನ್ನ ತಂದೆಯ ಜೀವಿತಾವಧಿಯಲ್ಲಿ ಭೂಮಿಯನ್ನು ವ್ಯವಸಾಯ ಮಾಡುತ್ತಿದ್ದ ಗೇಣಿದಾರಳನ್ನಾಗಿ ಗುರುತಿಸಿಕೊಳ್ಳಲು ಸಾಧ್ಯವಿರಲಿಲ್ಲವಾದ್ದರಿಂದ, ಅವರು ನಮೂನೆಸಂಖ್ಯೆ: 7 ನ್ನು ಸಲ್ಲಿಸುವುದರಲ್ಲಿ ಜೊತೆಗೂಡಲು ಸಾಧ್ಯವಿರಲಿಲ್ಲ.ಆಕೆಯುದಿನಾಂಕ: 01.03.1974 ರಂದು ಗೊತ್ತುಪಡಿಸಿದಂತೆ ಸ್ವತಂತ್ರವಾಗಿ ತನ್ನ ತಂದೆಯೊಂದಿಗೆ ವಿವಾದದಲ್ಲಿರುವ ಭೂಮಿಯಲ್ಲಿ ಸಾಗುವಳಿ ಮಾಡುತ್ತಿದ್ದಳು ಎಂಬುದು ಆಕೆಯ ವಾದವಾಗಿಲ್ಲವಾದ್ದರಿಂದ, ತಂದೆಯೊಂದಿಗೆ ಅಧಿಭೋಗದ ಹಕ್ಕುಗಳ ಮಂಜೂರಾತಿಗೆ ಆಕೆಯು ಹಕ್ಕುದಾರಳಾಗಿರುವುದಿಲ್ಲ.

ಇಂಥ ಸಂದರ್ಭಗಳಲ್ಲಿ, ವಾದಿಯು ತನ್ನ ತಂದೆಯ ಹೆಸರಿಗೆ ಪ್ರಧಾನವಾದ ಗೇಣಿ ಹಕ್ಕುಗಳಲ್ಲಿ ಪಾಲನ್ನು ಪಡೆಯಲು ಹಕ್ಕುದಾರಳಾಗಿದ್ದಾಳೆ ಎಂದು ನಿರ್ಣಯವನ್ನು ದಾಖಲಿಸುವಲ್ಲಿ ವಿಚಾರಣಾ ನ್ಯಾಯಾಲಯವು ಗಂಭೀರ ತಪ್ಪನ್ನು ಎಸಗಿದೆ.

23. ಮಗಳು-ವಾದಿಯ ತಂದೆಯ ಪರವಾಗಿ ಅಧಿಭೋಗದ ಹಕ್ಕುಗಳು ಪ್ರದತ್ತವಾಗಿರುವಾಗ ದಾವೆ ಸ್ವತ್ತುಗಳ ಸಂಬಂಧದಲ್ಲಿ ಯಾವುದೇ ಹಕ್ಕನ್ನು ತನ್ನ ತಂದೆಯ ಜೀವಿತಾವಧಿಯಲ್ಲಿ ಆಕೆಯು ಕ್ಲೇಮು ಮಾಡುವಂತಿಲ್ಲ.ಹೀಗೆ ವಾದಿಯ ತಂದೆಯ ಪರವಾಗಿ ಪ್ರದತ್ತವಾದ ಅಧಿಭೋಗದ ಹಕ್ಕುಗಳನ್ನು ಪಿತ್ರಾರ್ಜಿತ ಆಸ್ತಿ ಎಂದು ನಿರೂಪಿಸಿ, ಅದರ ಆಧಾರದ ಮೇಲೆ ವಿಭಜನೆಗಾಗಿ ದಾವೆಯನ್ನು ಸಮರ್ಥಿಸುವ ಸಲುವಾಗಿ ಯಾವುದೇ ಜನ್ಮಜಾತ ಹಕ್ಕನ್ನು ಆಕೆಯು ಪಡೆಯಲಾಗುವುದಿಲ್ಲ.ವಿಚಾರಣಾ ನ್ಯಾಯಾಲಯವು ಈ ಪ್ರಮುಖ ಅಂಶವನ್ನು ಪರೀಕ್ಷಿಸುವಾಗ ಸ್ವತಃ ತಪ್ಪು ನಿರ್ದೇಶನ ಹೊಂದಿದೆ.ಆದ್ದರಿಂದ, ವಾದಿ ಪ್ರತಿವಾದಿಸಂಖ್ಯೆ: 1 ಇವರ ವಿರುದ್ಧ ಹಾಗೂ ಅಪೀಲುದಾರ-ಪ್ರತಿವಾದಿಸಂಖ್ಯೆ: 1 ಇವರ ಪರವಾಗಿ (i) ನೇ ಮತ್ತು(ii) ನೇ ಅಂಶಗಳಿಗೆ ಉತ್ತರಿಸಬೇಕಾದ ಅಗತ್ಯವಿದೆ ಎಂಬುದಾಗಿ ನಾವು ಅಭಿಪ್ರಾಯ ಉಳ್ಳವರಾಗಿದ್ದೇವೆ.ತದನುಸಾರವಾಗಿ, ನಾವು ( i) ನೇ ಮತ್ತು(ii) ನೇ ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸುತ್ತೇವೆ.

24. ಉಲ್ಲೇಖಾಂಶಸಂಖ್ಯೆ:(iii):ದಾವಾ ಅರ್ಜಿಯಲ್ಲಿ ಮಾಡಿರುವ ಸಮರ್ಥನೆಗಳ ಜಾಗರೂಕ ಪರಿಶೀಲನೆಯ ನಂತರ, ಪ್ರತಿವಾದಿಸಂಖ್ಯೆ: 7 ಇವರ ತಂದೆ ಮೃತ ಭರ್ಮುವನ್ನು ' ಗಿಡಗಲೆ ' ಕುಟುಂಬ ಸದಸ್ಯರು ದತ್ತು ಸ್ವೀಕಾರ ಮಾಡಿದ್ದಾರೆಂದು ಆರೋಪಿಸಿರುವುದಕ್ಕೆ ಸಂಬಂಧಿಸಿದಂತೆ ವಾದಿಯು ಯಾವುದೇ ವಿವರಗಳನ್ನು ಒದಗಿಸಿರುವುದಿಲ್ಲ.ವಾದಿಯ ವಾದಗಳಲ್ಲಿಯಾಗಲೀ ಅಥವಾ ಸಾಕ್ಷ್ಯಗಳಲ್ಲಾಗಲೀ ಅಂಥ ದತ್ತು ಸ್ವೀಕಾರದ ದಿನಾಂಕವನ್ನಾಗಲಿ ಅಥವಾ ಆ ಬಾಲಕನನ್ನು ದತ್ತು ಸ್ವೀಕರಿಸಿದ ವ್ಯಕ್ತಿಯ ಕುರಿತು ವಿವರಗಳಾಗಲೀ ಕಂಡುಬರುತ್ತಿಲ್ಲ ಅಥವಾ ಅದಕ್ಕೆ ಸಂಬಂಧಿಸಿದಂತೆ ವಾದಿಯು ಯಾವುದೇ ಮೌಖಿಕ ಅಥವಾ ದಸ್ತಾವೇಜೀಯ ಸಾಕ್ಷ್ಯಗಳನ್ನಾಗಲಿ ಒದಗಿಸಿರುವುದಿಲ್ಲ.

25. ಹೆಚ್ಚುವರಿ ವಿವಾದಾಂಶಸಂಖ್ಯೆ: 1 ನ್ನು ರೂಪಿಸುವಾಗ, ವಿಚಾರಣಾ ನ್ಯಾಯಾಲಯವು, ಸಾಕ್ಷ್ಯದ ಹೊಣೆಯನ್ನು ಪ್ರತಿವಾದಿಗಳ ಮೇಲೆ ತಪ್ಪಾಗಿ ಈ ರೀತಿಯಾಗಿ ಹೊರಿಸಿದೆ: 'ಪ್ರತಿವಾದಿಸಂಖ್ಯೆ: 4 ರಿಂದ 6 ಇವರು ಮೃತ ಭರ್ಮು ಅವರನ್ನು ದತ್ತು ನೀಡಲಾಗಿಲ್ಲವೆಂದು ಸಾಬೀತುಪಡಿಸುತ್ತಾರೆಯೇ? 'ಮೂಲ ಪುರುಷ ಧೂಳಪ್ಪ ಅವರ ಪುತ್ರರಲ್ಲಿ ಒಬ್ಬರಾದ ಮೃತ ಭರ್ಮುವನ್ನು ' ಗಿಡಗಲೆ ' ಕುಟುಂಬಕ್ಕೆ ದತ್ತು ನೀಡಲಾಗಿತ್ತು ಮತ್ತು ಆದ್ದರಿಂದಾಗಿ ಆತನು ದಾವೆ ನಿಗದಿತ ಸ್ವತ್ತುಗಳ ಗೇಣಿ ಹಕ್ಕುಗಳ ಸಂಬಂಧದಲ್ಲಿ ಯಾವುದೇ ಪಾಲನ್ನು ಕೇಮು ಮಾಡಲು ಹಕ್ಕುಳ್ಳವರಾಗಿಲ್ಲವೆಂದು ವಾದಿಯು ಒಂದು ನಿರ್ದಿಷ್ಟವಾದ ವಾದದೊಂದಿಗೆ ಬಂದಾಗ, ವಿಚಾರಣಾ ನ್ಯಾಯಾಲಯವು, ಸದರಿ ಸಂಗತಿ ಕುರಿತು ವಾದ ಮಂಡಿಸಲು ಮತ್ತು ಅದನ್ನು ರುಜುವಾತುಪಡಿಸುವ

ಹೊಣೆಯನ್ನು ವಾದಿಗೆ ವಹಿಸಬಹುದಾಗಿತ್ತು.ದಾಖಲೆಗಳನ್ನು ಜಾಗರೂಕತೆಯಿಂದ ಅವಲೋಕಿಸಿದ ನಂತರ, ವಾದಿಯು ದತ್ತು ಸ್ವೀಕಾರಕ್ಕೆ ಸಂಬಂಧಿಸಿದ ವಿವರಗಳನ್ನು ಸಮರ್ಥಿಸಿಲ್ಲ ಅಥವಾ ಆ ಸಂಬಂಧದಲ್ಲಿ ಯಾವುದೇ ಸಾಕ್ಷ್ಯಗಳನ್ನು ಮಂಡಿಸಿಲ್ಲ ಎಂದು ತಿಳಿದು ಬರುತ್ತದೆ.ಹೆಚ್ಚುವರಿ ವಿವಾದಾಂಶಸಂಖ್ಯೆ: 1 ಎಂದು ರೂಪಿಸಲಾದ ನಕಾರಾತ್ಮಕ ವಿವಾದಾಂಶವನ್ನು ರುಜುವಾತುಪಡಿಸುವ ಹೊಣೆಯನ್ನು ಪ್ರತಿವಾದಿಗಳ ಮೇಲೆ ಹೊರಿಸುವಲ್ಲಿ ವಿಚಾರಣಾ ನ್ಯಾಯಾಲಯವು ಸಂಪೂರ್ಣವಾಗಿ ತಪ್ಪೆಸಗಿದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ.ಈ ಸಂಬಂಧದಲ್ಲಿ ವಿಚಾರಣಾ ನ್ಯಾಯಾಲಯವು ದಾಖಲಿಸಿದ ನಿರ್ಣಯವು, ಮೃತ ಭರ್ಮ್ಯುವಿನ ಉಪನಾಮದಲ್ಲಿರುವ ವ್ಯತ್ಯಾಸದಿಂದ ಮಾತ್ರವೇ ಆಗಿದೆ. ಅಧಿವಿಚಾರಣಾ ನ್ಯಾಯಾಲಯದ ತೀರ್ಪಿನ 26 ನೇ ಕಂಡಿಕೆಯಲ್ಲಿ ಭರ್ಮ್ಯುವನ್ನು ದತ್ತು ನೀಡದೆ ಹೋಗಿದ್ದರೆ, ಪ್ರತಿವಾದಿಸಂಖ್ಯೆ: 1 ಅವರು ಭರ್ಮ್ಯು ಅವರ ಜೊತೆಗೆ ದಾವೆಯಲ್ಲಿರುವ ಭೂಮಿ ಸಂಬಂಧದಲ್ಲಿ ಅಧಿಭೋಗದ ಹಕ್ಕುಗಳ ಮಂಜೂರಾತಿಗಾಗಿ ಮನವಿ ಸಲ್ಲಿಸಬಹುದಾಗಿತ್ತು ಎಂದು ಅದು ನಿರ್ಣಯಿಸಿದೆ.ನೀಡಲಾದ ಇನ್ನೊಂದು ಕಾರಣವೆಂದರೆ, ಪ್ರ.ಸಾ .1 ಒಪ್ಪಿಕೊಂಡಿರುವಂತೆ, ಭೂ ನ್ಯಾಯಾಧಿಕರಣವು ಹೊರಡಿಸಿದ ಆದೇಶವನ್ನು ಅನುಸರಿಸಿ, ಪ್ರತಿವಾದಿಸಂಖ್ಯೆ: 1 ಮತ್ತು ಅವರ ಇನ್ನೊಬ್ಬ ಸಹೋದರ ಮೃತ ರಘುವಿನ ಹೆಸರುಗಳು ಮಾತ್ರ ಹಕ್ಕುಗಳ ದಾಖಲೆಯಲ್ಲಿ ಬದಲಾವಣೆಯಾಗಿವೆ.ಆದರೆ ಭರ್ಮ್ಯುವಿನ ಹೆಸರು ಬದಲಾವಣೆಗೊಂಡಿಲ್ಲವಾದ್ದರಿಂದ ಆತನನ್ನು ವಾಸ್ತವದಲ್ಲಿ ಗಿಡಗಲೆ ' ಕುಟುಂಬಕ್ಕೆ ದತ್ತು ನೀಡಲಾಗಿತ್ತು ಎಂಬುದು ಗೊತ್ತಾಗುತ್ತದೆ.ಪ್ರತಿವಾದಿಸಂಖ್ಯೆ: 7 ಅವರ ತಂದೆಯ ಉಪನಾಮವು ' ಚಂದಗಡೆ ' ಆಗಿರದೆ ' ಗಿಡಗಲೆ ' ಎಂದು ಏಕಿದೆ ಎಂಬುದನ್ನು ವಿವರಿಸಲು ಸಾಕ್ಷಿ ಕಟಕಟೆಗೆ ಬಂದಿರುವುದಿಲ್ಲ, ಆದ್ದರಿಂದ ಆ ಸಂಬಂಧದಲ್ಲಿ ಪ್ರತಿಕೂಲವಾಗಿ ಊಹಿಸಬೇಕಾಗಿತ್ತು ಎಂಬುದು ವಿಚಾರಣಾ ನ್ಯಾಯಾಲಯವು ಪರಿಗಣನೆಗೆ ತೆಗೆದುಕೊಂಡ ಇನ್ನೊಂದು ಸಂದರ್ಭವಾಗಿದೆ.

26. ನಮ್ಮ ಅಭಿಪ್ರಾಯದಲ್ಲಿ, ಮಾನ್ಯ ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರ ತೀರ್ಮಾನವು ಸಂಪೂರ್ಣವಾಗಿ ತಪ್ಪಾದುದಾಗಿದೆ.ಭರ್ಮ್ಯುವಿನ ಹೆಸರನ್ನು ಆತನ ಇಬ್ಬರು ಸಹೋದರರ ಜೊತೆಗೆ ಕಂದಾಯ ದಾಖಲೆಗಳಲ್ಲಿ ಬದಲಾವಣೆ ಮಾಡದಿರುವುದರಲ್ಲಿ ಹಾಗೂ ಆತನ ಉಪನಾಮವನ್ನು ' ಚಂದಗಡೆ ' ಎಂದು ವಿವರಿಸದಿರುವುದರಲ್ಲಿರುವ ಇಂತಹ ವ್ಯತ್ಯಾಸ ಇರುವ ಸಂದರ್ಭ ಏನೇ ಇದ್ದರೂ, ಭರ್ಮ್ಯುವನ್ನು ' ಗಿಡಗಲೆ ' ಕುಟುಂಬಕ್ಕೆ ದತ್ತು ನೀಡಲಾಗಿತ್ತು ಎಂಬ ಪ್ರತಿಕೂಲ ಊಹೆಗೆ ಆಧಾರವನ್ನಾಗಿಸಲು ಸಾಧ್ಯವಿಲ್ಲ.ಸದರಿ ವಾದವನ್ನು ಸಲ್ಲಿಸುವ ವ್ಯಕ್ತಿಯು ದತ್ತು ಸ್ವೀಕಾರದ ವಾಸ್ತವ ಸಂಗತಿಯನ್ನು ರುಜುವಾತುಪಡಿಸಬೇಕಾಗುತ್ತದೆ.ಬಾಲಕನನ್ನು ದತ್ತು ನೀಡಿದ ಹಾಗೂ ಸ್ವೀಕರಿಸಿದ ಸಮಾರಂಭದ ಬಗ್ಗೆ ವಾದ ಮಂಡಿಸಬೇಕಾಗುತ್ತದೆ.ಆ ಪರಿಣಾಮಕ್ಕೆ ಯಾವುದೇ ಸಾಕ್ಷ್ಯವನ್ನು ಒದಗಿಸಿರುವುದಿಲ್ಲ.ಆದ್ದರಿಂದ, ಅಂತಹ ಪ್ರತಿಕೂಲ ಊಹೆಗೆ ಬರಲು ಮತ್ತು ಆ ಪರಿಣಾಮಕ್ಕೆ ನಿರ್ಣಯವನ್ನು ದಾಖಲಿಸಲು ವಿಚಾರಣಾ ನ್ಯಾಯಾಲಯಕ್ಕೆ ಖಂಡಿತವಾಗಿ ಯಾವುದೇ ಸಮರ್ಥನೆ ಇರಲಿಲ್ಲ.ಆದ್ದರಿಂದ, ಸದರಿ ನಿರ್ಣಯವು ಕಾನೂನಿನಲ್ಲಿ ಹಾಗೂ ಪ್ರಸ್ತುತ ಮೊಕದ್ದಮೆಯ ಸಂಗತಿ ಮತ್ತು ಸನ್ನಿವೇಶಗಳ ಹಿನ್ನಲೆಯಲ್ಲಿ ಸಮರ್ಥನೀಯವಾದುದಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿದೆ.ತದನುಸಾರವಾಗಿ, ನಾವು ಆರ್.ಎಫ್.ಎ.ಸಂಖ್ಯೆ: 4179/2012 ರಲ್ಲಿ, ಅಪೀಲುದಾರರ ಪರವಾಗಿ ಅಂಶಸಂಖ್ಯೆ:(iii) ಕ್ಕೆ ನಾವು ಉತ್ತರಿಸುತ್ತೇವೆ.

27. ಪ್ರತಿವಾದಿಯ ಪರ ಮಾನ್ಯ ನ್ಯಾಯವಾದಿಗಳಾದ ಕೆ.ಎಸ್. ಹೇಮಲೇಖಾ ಅವರು, ಪ್ರಕರಣ 2 (12) ರಲ್ಲಿ ಪರಿಭಾಷಿಸಿದಂತೆ, ' ಕುಟುಂಬ ' ಪದದ ಪರಿಭಾಷೆಯ ದೃಷ್ಟಿಯಲ್ಲಿ ಮತ್ತು ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 ರ 24 ನೇ ಪ್ರಕರಣದ ಉಪಬಂಧಗಳ ಹಿನ್ನೆಲೆಯಲ್ಲಿ, ಗೇಣಿದಾರರ ಹಕ್ಕುಗಳು ಅನುವಂಶೀಯವಾಗಿದ್ದು, ವಾದಿಯ ತಂದೆ, ಪ್ರತಿವಾದಿಸಂಖ್ಯೆ: 1 ಅವರ ಪರವಾಗಿ ಮಂಜೂರಾದ ಗೇಣಿ ಹಕ್ಕುಗಳಲ್ಲಿ ಅನುವಂಶೀಯವಾಗಿ ಅರ್ಧ ಪಾಲನ್ನು ಪಡೆಯಲು ಹಕ್ಕುಳ್ಳವರಾಗಿದ್ದಾರೆ ಎಂಬ ವಾದವು ಕಾನೂನಿನಲ್ಲಿ ಸಮರ್ಥನೀಯವಾದುದಲ್ಲ ಎಂದು ವಾದಿಸಿದ್ದಾರೆ.ಪ್ರಕರಣ 2 (12) ರಲ್ಲಿ ಕಂಡುಬಂದ ' ಕುಟುಂಬ'ದ ಪರಿಭಾಷೆಗೆ, ಪ್ರಸ್ತುತ ಮೊಕದ್ದಮೆಯಲ್ಲಿ ವಾದಿಯ ಹಕ್ಕುಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಉದ್ದೇಶದಲ್ಲಿ ಯಾವುದೇ ಪ್ರಸ್ತುತತೆ ಇಲ್ಲ. 24 ನೇ ಪ್ರಕರಣಕ್ಕೆ ಸಂಬಂಧಪಟ್ಟಷ್ಟರಮಟ್ಟಿಗೆ ಗೇಣಿದಾರನು ಮೃತನಾದಲ್ಲಿ, ಗೇಣಿದಾರನು ಮರಣ ಹೊಂದಿದ ಸಮಯದಲ್ಲಿ ಪಾಲಿಸುತ್ತಿದ್ದ ಅವೇ ನಿಬಂಧನೆಗಳು ಹಾಗೂ ಷರತ್ತುಗಳ ಆಧಾರದ ಮೇಲೆ ಅಂಥ ಗೇಣಿದಾರನ ಉತ್ತರಾಧಿಕಾರಿಗಳೊಂದಿಗೆ ಗೇಣಿಯನ್ನು ಭೂ ಮಾಲೀಕನು ಮುಂದುವರೆಸುತ್ತಿರುವನು ಎಂದು ಭಾವಿಸತಕ್ಕದ್ದು ಎಂದು ಅದು ಉಪಬಂಧಿಸುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.ಈ ಉಪಬಂಧವ ವಾದಿಯ ತಂದೆಗೆ ಗೇಣಿ ಹಕ್ಕುಗಳ ಉತ್ತರಾಧಿಕಾರವನ್ನು ಕ್ಷೇಮು ಮಾಡಲು ಶಕ್ತಗೊಳಿಸುತ್ತದೆ.ಏನೇ ಆದರೂ, ಗೊತ್ತುಪಡಿಸಿದದಿನಾಂಕ: 01.03.1974 ರಂದು ಇದ್ದಂತೆ ವಾದಿಯ

ತಂದೆಯು ಆತನ ಸಹೋದರರು ಹಾಗೂ ತಾಯಿಯೊಂದಿಗೆ ವಾಸ್ತವವಾಗಿ ದಾವೆ ನಿಗದಿತ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದುದರಿಂದ, ವಿವಾದದಲ್ಲಿರುವ ಜಮೀನುಗಳ ಸಂಬಂಧದಲ್ಲಿ ಅಧಿಭೋಗದ ಹಕ್ಕುಗಳನ್ನು ಕ್ಲೇಮು ಮಾಡಲು ಸ್ವತಂತ್ರ ಹಕ್ಕನ್ನು ಹೊಂದಿದ್ದಾರೆ.ಆದ್ದರಿಂದ, ವಾದಿಯ ತಂದೆಯು, ತನ್ನ ತಂದೆಯಿಂದ ಗೇಣಿ ಹಕ್ಕುಗಳನ್ನು ಪಿತ್ರಾರ್ಜಿತವಾಗಿ ಗಳಿಸಿದ್ದರು.ಎಂದು ಭಾವಿಸಿದರೂ ಸಹ, ಅದು, ವಾದಿಯ ತಂದೆಯ ಜೊತೆಗೆ ಆಕೆಯೂ ಆ ಹಕ್ಕುಗಳನ್ನು ಪಿತ್ರಾರ್ಜಿತವಾಗಿ ಪಡೆದಿದ್ದಾಳೆ ಎಂದು ಕ್ಲೇಮು ಮಾಡಲು ಹಕ್ಕು ನೀಡುವುದಿಲ್ಲ.ಅಂತಹ ಸಂದರ್ಭದಲ್ಲಿ, ಸಹ-ದಾಯಾದಿತನದ ಪರಿಕಲ್ಪನೆ ಹಾಗೂ ಪಿತ್ರಾರ್ಜಿತ ಸ್ವತ್ತಿನ ಪರಿಕಲ್ಪನೆಯನ್ನು ಅನ್ವಯಿಸಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. ಯಾವುದೇ ಸಂದರ್ಭದಲ್ಲೂ, ಈ ಮೇಲೆ ಈಗಾಗಲೇ ಹೇಳಿದಂತೆ, ಮೂಲ ಗೇಣಿದಾರ ಧೂಳಪ್ಪ ಅಲಿಯಾಸ್ ಧೂಳುವಿನ ಮರಣದ ನಂತರ, ಅಧಿಭೋಗದ ಹಕ್ಕುಗಳನ್ನು ಪಿತ್ರಾರ್ಜಿತವಾಗಿ ಗಳಿಸಿದಾಗ, ವಾದಿಯು ಒಬ್ಬ ಸಹ ದಾಯಾದಿಯಾಗಿರಲಿಲ್ಲ.ಆದ್ದರಿಂದ, ಮಾನ್ಯ ನ್ಯಾಯವಾದಿಗಳ ಮೇಲಿನ ವಾದವು, ವಾದಿಯ ಮೊಕದ್ದಮೆಯನ್ನು ಯಾವುದೇ ರೀತಿಯಲ್ಲಿಯೂ ಸಮರ್ಥಿಸುವುದಿಲ್ಲ.

28. ಹಿಂದೆ ಹೇಳಿದ ಕಾರಣಗಳಿಗಾಗಿ, ಈ ಎರಡೂ ಅಪೀಲುಗಳು ಪುರಸ್ಕರಿಸಲು ಯೋಗ್ಯವಾಗಿವೆ.ತದನುಸಾರವಾಗಿ, ಪ್ರಶ್ನಿತ ತೀರ್ಪು ಹಾಗೂ ಪ್ರಶ್ನೆಯಲ್ಲಿರುವ ಡಿಗ್ರಿಗಳನ್ನು ರದ್ದುಗೊಳಿಸಲಾಗಿದೆ.ವಾದಿಯು ಸಲ್ಲಿಸಿದ ದಾವೆಯನ್ನು ವಜಾ ಮಾಡಲಾಗಿದೆ.

29. ಮೊಕದ್ದಮೆಯ ವಿಶಿಷ್ಟ ಸಂಗತಿಗಳ ಹಾಗೂ ಸಂದರ್ಭಗಳ ಹಿನ್ನೆಲೆಯಲ್ಲಿ, ಎರಡೂ ಪಕ್ಷಕಾರರು ಅವರವರ ವೆಚ್ಚಗಳನ್ನು ಅವರೇ ಭರಿಸಲು ನಿರ್ದೇಶಿಸಲಾಗಿದೆ.